

ಅಸ್ಪೃಶ್ಯರ ಮುಂದೆ ಹೀಗೆ ನುಡಿದಿದ್ದರು: “ನೀವು ಹಿಂದೂಮತದೊಂದಿಗಿನ ನಿಮ್ಮ ಸಂಪರ್ಕವನ್ನು ಕಡಿದುಹಾಕಿ ಮತ್ತಾವ ಮತವನ್ನಾದರೂ ಸ್ವೀಕರಿಸಿರೆಂದು ನಾನು ಸೂಚಿಸುತ್ತೇನೆ. ಆದರೆ, ಹಾಗೆ ಮಾಡುವಾಗ ಎಚ್ಚರದಿಂದಿರಿ. ಹೊಸ ಮತವನ್ನು ಆಯ್ಕೆ ಮಾಡಿಕೊಳ್ಳುವಾಗ ಬೇಷರತ್ತಾಗಿ ಸಮಾನ ಉಪಚಾರ, ಸ್ಥಾನಮಾನ, ಹಾಗೂ ಅವಕಾಶಗಳು ಸಿಗುವುದನ್ನು ಖಚಿತಪಡಿಸಿಕೊಳ್ಳಿ... ದುರದೃಷ್ಟವಶಾತ್, ನಾನಂತೂ ಹಿಂದೂ ಅಸ್ಪೃಶ್ಯನಾಗಿ ಹುಟ್ಟಿದೆ. ಅದು ನನ್ನ ನಿಯಂತ್ರಣ ಮೀರಿದ್ದಾಗಿತ್ತು. ಆದರೆ, ಕೀಳು ಮತ್ತು ಅವಮಾನಕರ ಪರಿಸ್ಥಿತಿಗಳಲ್ಲಿ ಬದುಕುವುದನ್ನು ನಿರಾಕರಿಸುವುದು ನನ್ನ ನಿಯಂತ್ರಣದಲ್ಲಿದೆ. ನಾನು ಹಿಂದೂವಾಗಿ ಮಾತ್ರ ಸಾಯಲಾರೆ ಎಂಬ ವಾಗ್ದಾನವನ್ನು ನೀಡಬಲ್ಲೆ.” ಇದಾದ ಎರಡು ತಿಂಗಳಿಗೆ ಲಾಹೋರ್‌ನ ಸುಧಾರಣವಾದಿ ಸಂಸ್ಥೆಯಾದ ‘ಜಾತ್ ಪಾತ್ ತೋಡಕ್ ಮಂಡಲ್’ ತಮ್ಮ ವಾರ್ಷಿಕ ಸಮ್ಮೇಳನಕ್ಕೆ ಭಾರತೀಯ ಜಾತಿ ವ್ಯವಸ್ಥೆ ಕುರಿತು ಭಾಷಣ ನೀಡಲು ಅಂಬೇಡ್ಕರರನ್ನು ಆಹ್ವಾನಿಸಿತು. ಅದನ್ನು ಸ್ವೀಕರಿಸಿ, ಮುದ್ರಣ ಹಾಗೂ ಪ್ರಸರಣಕ್ಕೆ 1936ರಲ್ಲಿ ‘ಅನಿಹಿಲೇಶನ್ ಆಫ್ ಕ್ಯಾಸ್ಟ್’ ಪ್ರಬಂಧವನ್ನು ಕಳಿಸಿಕೊಡುತ್ತಾರೆ. ಆಯೋಜಕರು ಅದರಲ್ಲಿ ಆಕ್ಷೇಪಾರ್ಹ ವಿಷಯವಿರುವುದನ್ನು ತಿಳಿಸಿದಾಗ, ಮೇ 15, 1936ಕ್ಕೆ ತಾವೇ 1500 ಪ್ರತಿಗಳನ್ನು ಮುದ್ರಿಸಿ ಹಂಚುತ್ತಾರೆ. ಇದು ಇಲ್ಲಿ ಯಾಕೆ ಮುಖ್ಯವೆಂದರೆ, ಕಾನ್ಶಿರಾಮ್ ಅಂತಹವರನ್ನು ಹೋರಾಟಕ್ಕೆ ಪ್ರೇರೇಪಿಸಿದ್ದೇ ಈ ಪಠ್ಯ. ಅವರ ನಂತರದ ಮತ್ತೊಬ್ಬ ಅಂಬೇಡ್ಕರ್‌ವಾದಿ ಹೋರಾಟಗಾರರೆಂದರೆ, ಕರ್ನಾಟಕ ದಲಿತ ಸಂಘರ್ಷ ಸಮಿತಿಯ ಸಂಸ್ಥಾಪಕರಾದ ಬಿ. ಕೃಷ್ಣಪ್ಪನವರೆಂದು ಕಾಣುತ್ತದೆ. ನಂತರದ ಮುಂದಿನ ಎರಡು ದಶಕಗಳ ಕಾಲ ಅಂಬೇಡ್ಕರರು ಇಸ್ಲಾಂ, ಕ್ರೈಸ್ತಮತ, ಜೊರಾಸ್ಟ್ರಿಯನ್ ಮತ, ಸಿಖ್ ಮತ ಹಾಗೂ ಬೌದ್ಧಮತವನ್ನು ಆಳವಾಗಿ ಅಧ್ಯಯನ